ನಿರಾಸೆಗಳ ನಡುವೆಯೂ ದೀಪವೊಂದು ದಾರಿ ತೋರಬಲ್ಲದು ಎಂಬ ಭರವಸೆಯನ್ನು ಅವರು ಕಳೆದುಕೊಂಡಿಲ್ಲ. ಅವರು ಮನುಷ್ಯಪ್ರೀತಿ ಸಾಧ್ಯವಾಗಿಸದ ಜಗದ ತೊಡರುಗಳಿಗೆ ಕವಿತೆಯ ಮೂಲಕ ಉತ್ತರ ಕಂಡುಕೊಳ್ಳಲು ಹೊರಟವರು. ಹೀಗಾಗಿಯೇ ಇಲ್ಲಿನ ಕವಿತೆಗಳು ಅಂತರಂಗದ ಉಲುಹುಗಳಾಗಿರುವಂತೆಯೇ ಕವಿ ಎಲ್ಲರೊಡನೆ ನಡೆಸುತ್ತಿರುವ ಸಂವಾದವೂ ಆಗಿದೆ.

'ಒದ್ದೆಗಣ್ಣಿನ ದೀಪ' ಕವನ ಸಂಕಲನ ಓದುವಾಗ ಕವಿ ಬಳಿಯಲ್ಲೇ ಕುಳಿತು ಈ ಸಾಲುಗಳನ್ನು ನಮ್ಮ ಮುಂದಿಡುತ್ತಿರುವಂತೆ ಭಾಸವಾಗುತ್ತದೆ. ಪದಗಳ ಜೊತೆ, ಲೋಕ ಪದಗಳಿಗೆ ಕೊಟ್ಟ ಅರ್ಥಗಳ ಸಂಪ್ರದಾಯದ ಜೊತೆ ಆಟವಾಡುತ್ತಾ ಅವುಗಳನ್ನು ಒಡೆಯುತ್ತಾ ಕನ್ನಡದವೇ ಆಗಿಹೋಗಿರುವ ಉರ್ದು ಪದಗಳ ಲಾಸ್ಯದೊಂದಿಗೆ ಚಾಂದ್ ಅವರ ಕವಿತೆಗಳು ನಮ್ಮೊಂದಿಗೆ ಬಹುಬೇಗ ಸ್ನೇಹ ಬೆಳೆಸಿಕೊಂಡು ಬಿಡುತ್ತವೆ. ಹೀಗೆ ಮಾಡುತ್ತಾ ವೈರುಧ್ಯಗಳ ಲೋಕವನ್ನು ನಮ್ಮ ಮುಂದಿಡುತ್ತಾ ಅರ್ಥಗಳ ಜಾಲದಲ್ಲಿ ಈ ಕವಿತೆಗಳು ನಮ್ಮನ್ನು ಕಕ್ಕಾಬಿಕ್ಕಿಯಾಗಿಸಿಬಿಡುತ್ತವೆ.

ಪ್ರೀತಿಯೇ ಜೀವಂತಿಕೆ ಮತ್ತು ಪ್ರೀತಿಯ ಗೈರು ಹಾಜರಿಯೇ ಸಾವು. ಅವಳ ಬಗೆಗಿನ ಕಡುಮೋಹದ ಕವಿತೆಗಳನ್ನು ಚಾಂದ್ ಬರೆಯುತ್ತಾರೆ. ಅವಳೆಂದರೆ ಬೆರಗು, ಈ ಪ್ರೀತಿ ಹುಟ್ಟಿಸಿದ ಬೆರಗಿನಿಂದ ಜಗತ್ತೇ ಬದಲಾಗುವುದು. ಇಲ್ಲಿ ಬೆಳದಿಂಗಳು, ಚಂದ್ರ ಎಲ್ಲರೂ ತಮ್ಮ ಪಾತ್ರಗಳನ್ನು ಬದಲಿಸಿಕೊಳ್ಳುತ್ತಾರೆ; 'ಕಳ್ಳರೂ ಕೂಡಾ ಕದಿಯುವುದು ತಪ್ಪು' ಎನ್ನುತ್ತಾರೆ. ಈ ಬಗೆಯ ತೀವ್ರ ಮೋಹದ ಕವಿತೆಗಳೂ ಅಯಾಚಿತವಾಗಿ ಸೆಳೆದುಬಿಡುತ್ತವೆ. ಇವೇನೂ ವಿಶೇಷ ಅನಿಸುವುದಿಲ್ಲ. ಆದರೆ, ಈ ತೀವ್ರತೆಗೂ ಪಲ್ಲಟ ಇದೆ. 'ಕಡಲದಡದಲಿ ಮರಳ ಮನೆ ಕಟ್ಟುತ್ತಲೇ ಇರುವ ಈ ಬದುಕಿನ ಆಟ' ಮುಂದುವರೆದಿದೆ. 'ಕೊನೆಯ ಭೇಟಿಯಲಿ ಇಬ್ಬರಲ್ಲೂ ಹತಾಶೆ ಇರಲಿಲ್ಲ, ಖುಲಾಸೆಯಾದ ಖುಷಿ ಇತ್ತು' ಎಂಬ ಸಾಲುಗಳು ಬದುಕಿನ ಕಟುವಾಸ್ತವವನ್ನು ನಿರೂಪಿಸುವ ಬಗೆ ಅದರ ಸಹಜತೆ ಮತ್ತು ನೇರವಂತಿಕೆಯ ಕಾರಣಕ್ಕೆ ಇಷ್ಟವಾಗುತ್ತದೆ.

ವ್ಯಕ್ತಿಗಳ ನಡುವಣ ಪ್ರೀತಿಯೇ ವಿಸ್ತಾರವಾಗಿ ಲೋಕಪ್ರೀತಿಯಾಗಿ ಆತುಕೊಳ್ಳುತ್ತದೆ. ಆದರೆ,




**ಒದ್ದೆಗಣ್ಣಿನ ದೀಪ**
ಲೇ: ಚಾಂದ್ ಪಾಷ ಎನ್.ಎಸ್.
ಪು: 88 ಬೆಲೆ: ₹ 80
ಪ್ರ: ಕಾವ್ಯಮನೆ ಪ್ರಕಾಶನ, ಫ್ಲಾಟ್ ನಂಬರ್ 220, ಶಿವನಿಲಯ, ವೀರೇಂದ್ರ ಪಾಟೀಲ್ ಬಡಾವಣೆ, ಕಲಬುರಗಿ, 585105